

# ಗಟ್ಟಿಗಿತ್ತಿ..!



ಉಕ್ರೇನ್‌ನ ಕ್ರಿವಾಯ್ ರೋಗ್ ನಗರದಲ್ಲಿನ ವಾರ್ಯ ಅಕುಲೋವಾ ಭಾರ ಎತ್ತುವುದನ್ನು ನೋಡಿದವರೆಲ್ಲಾ ಬೆರಗಾಗುವುದು ಖಂಡಿತ. 1992 ರಲ್ಲಿ ಜನಿಸಿದ ಈಕೆ 2000ರಲ್ಲಿ 100 ಕೆ.ಜಿ. ಹಾಗೂ 2006 ರಲ್ಲಿ ತನ್ನ ತೂಕಕ್ಕಿಂತಲೂ ನಾಲ್ಕು ಪಟ್ಟು ಹೆಚ್ಚು ಭಾರವನ್ನು (300 ಕೆ. ಜಿ.) ಎತ್ತಿ, ಎರಡು ಬಾರಿ ಗಿನ್ನಿಸ್ ವಿಶ್ವ ದಾಖಲೆಯನ್ನು ತನ್ನ ಮುಡಿಗೇರಿಸಿಕೊಂಡಿದ್ದಾಳೆ.

ವಾರ್ಯ ಅಕುಲೋವಾ ಚಿಕ್ಕವಳಿರುವಾಗಲೇ ಅಸಾಧಾರಣ ಶಾರೀರಿಕ ಸಾಮರ್ಥ್ಯ ಹೊಂದಿದ್ದಳು. ಕೇವಲ ಒಂದು ವರ್ಷದ ಮಗುವಿದ್ದಾಗಲೇ ಉಲ್ಟಾ ಅಂದರೆ ಕೈಗಳನ್ನೂರಿ ಕಾಲುಗಳನ್ನು ಮೇಲೆ ಮಾಡಿ ನಡೆಯುತ್ತಿದ್ದಳಂತೆ. ಒಂದೂವರೆ ವರ್ಷದವಳಿದ್ದಾಗ ಚೆನ್ನಾಗಿ 'ಲಾಗ' ಹಾಕುತ್ತಿದ್ದ ಈಕೆ ಮೂರು ವರ್ಷದವಳಿದ್ದಾಗ ತಂದೆ ತಾಯಿಯರ ಜೊತೆ ಸರ್ಕಸ್ಸಿನಲ್ಲಿ ತನ್ನ ಕಸರತ್ತನ್ನು ಪ್ರದರ್ಶಿಸುತ್ತಿದ್ದಳಂತೆ. ನಾಲ್ಕು ವರ್ಷದವಳಾಗಿದ್ದಾಗ ಅತ್ಯಂತ ಹೆಚ್ಚು ಭಾರವನ್ನು ಸಲೀಸಾಗಿ ಎತ್ತಿ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಳಂತೆ. ಆರು ವರ್ಷದವಳಿದ್ದಾಗ ಎರಡು ಕೆಟಲ್ ಬೆಲ್(ರಷಿಯಾ ದೇಶದ ತೂಕ) ಗಳನ್ನು ಎತ್ತುವುದರ ಜೊತೆಗೆ ತನ್ನ ತಂದೆಯಾದ ಯೂರಿಯನ್ನೇ ಬೆನ್ನ ಮೇಲೆ ಎತ್ತಿಕೊಳ್ಳುತ್ತಿದ್ದಳಂತೆ. ಹನ್ನೆರಡು ವರ್ಷದವಳಿದ್ದಾಗ ಮೂರು ಕೆಟಲ್ ಬೆಲ್‌ಗಳನ್ನು ಎತ್ತುವುದರ ಜೊತೆಗೆ ತನ್ನ ತಂದೆ ತಾಯಿಯರಿಬ್ಬರನ್ನೂ ಸಲೀಸಾಗಿ ಎತ್ತಿಕೊಳ್ಳುತ್ತಿದ್ದಳಂತೆ.

ತಾಯಿ ಲಾರಿಸಾ ಗರ್ಭಿಣಿಯಾಗಿದ್ದಾಗ ಯೂರಿಯು ತನಗೆ ಗಂಡು ಮಗುವೇ ಹುಟ್ಟುತ್ತದೆ ಅದೂ ಸಹ ತನ್ನಂತೆಯೇ ಶಕ್ತಿಶಾಲಿ ಆಗಿದ್ದು, ಸರ್ಕಸ್ಸಿನಲ್ಲಿ ಪ್ರದರ್ಶನ ನೀಡುತ್ತದೆ ಎಂದು ಕನಸು ಕಾಣುತ್ತಿದ್ದನಂತೆ. ಆದರೆ ಹೆಣ್ಣು ಮಗು ಜನಿಸಿದ್ದರಿಂದ ತನ್ನ ಕನಸೆಲ್ಲವೂ ಭಗ್ನವಾಯಿತು ಎಂದುಕೊಂಡನಂತೆ. ಆದರೆ ದಿನ ಕಳೆದಂತೆ, ತರಬೇತಿ ನೀಡಿದರೆ ಮಗಳೂ ಸಹ ಯಾವ ಗಂಡಸಿಗೂ ಕಡಿಮೆ ಇಲ್ಲದೆ ಆಕೆ ಬಲಿಷ್ಠಳಾಗುತ್ತಾಳೆ ಎನಿಸಿತಂತೆ. ಇದು ಅವಳಿಗೆ ಪೂರ್ವಿಕರಿಂದ ಬಳುವಳಿಯಾಗಿ ಬಂದದ್ದು. ಈಕೆಯ ವಂಶಸ್ಥರು ಅತ್ಯಂತ ಶೂರರಾಗಿದ್ದು, ಎರಡನೇ ಕ್ಯಾಥರೀನ್ ಆಸ್ಥಾನದಲ್ಲಿ ಅತ್ಯದ್ಭುತ ಪ್ರದರ್ಶನ ನೀಡುತ್ತಿದ್ದರಂತೆ. ರಷ್ಯಾ ಮತ್ತು ಟರ್ಕಿ ಯುದ್ಧದಲ್ಲಿ ಹೋರಾಡಿದ್ದರಂತೆ. ಬಾಲ್ಯದಲ್ಲಿ ಬೇರೆ ಮಕ್ಕಳು ಬೊಂಬೆಯೊಡನೆ ಆಟವಾಡುತ್ತಿದ್ದರೆ ವಾರ್ಯ ಹೆಚ್ಚು ಹೆಚ್ಚು ಭಾರ ಹೊರುವ ಕಸರತ್ತನ್ನು ಮಾಡುತ್ತಿದ್ದಳಂತೆ. ವೆಯ್ಟ್ ಲಿಫ್ಟಿಂಗ್‌ನಲ್ಲಿ ಅನೇಕ ಬಹುಮಾನಗಳನ್ನು ಬಾಚಿಕೊಂಡು ಉಕ್ರೇನ್‌ನಲ್ಲಿ ಪ್ರಸಿದ್ಧಳಾಗಿರುವ ಈಕೆ, ಈಗ ಜಗತ್ತಿನಲ್ಲೇ ಅತ್ಯಂತ ಗಟ್ಟಿಗಿತ್ತಿ..!

■ ವಿದ್ಯಾ ವಿ. ಹಾಲಭಾವಿ